## ಸುದ್ದಿಸಂಚಯ

### ಚೆನ್ನೈ ಮಠದ ಪ್ರಕಾಶನ ವಿಭಾಗಕ್ಕೆ ಶತಮಾನದ ಸಂಭ್ರಮ

**ಸಂಕ್ಷಿಪ್ತ ಪರಿಚಯ :** ಚೆನ್ನೈ ರಾಮಕೃಷ್ಣ ಮಠದ ನೂರಾ ಹನ್ನೊಂದು ವರ್ಷಗಳ ಅಪೂರ್ವ ಇತಿಹಾಸದಲ್ಲಿ ೨೯ ಮಾರ್ಚ್ ೧೯೦೮ ಒಂದು ಮಹತ್ವದ ದಿನ. ಅಂದು ಅದರ ಸಂಸ್ಥಾಪಕರಾದ ಸ್ವಾಮಿ ರಾಮಕೃಷ್ಣಾನಂದರು 'Universe and Man' ಎಂಬ ತಾವು ಬರೆದ ಕೃತಿಯನ್ನು ಪ್ರಕಟಗೊಳಿಸಿದರು. ಅದೇ ವರ್ಷ ನವೆಂಬರ್ ತಿಂಗಳಿನಲ್ಲಿ ಸ್ವಾಮಿ ವಿವೇಕಾನಂದರ 'Inspired Talks' (ಸ್ಫೂರ್ತಿವಾಣಿ) ಬಿಡುಗಡೆಯಾಯಿತು. ಸ್ವಾಮಿ ವಿವೇಕಾನಂದರ ಶಿಷ್ಯರಾಗಿದ್ದ ಅಳಸಿಂಗ ಪೆರುಮಾಳ್ ೧೮೯೫ ರಲ್ಲಿ **ಬ್ರಹ್ಮವಾದಿನ್** ಎಂಬ ಪತ್ರಿಕೆಯನ್ನು ಆರಂಭಿಸಿದರು. ಹಾಗೆಯೇ ಅವರು ಸ್ವಾಮಿ ವಿವೇಕಾನಂದರ ಅನೇಕ ಭಾಷಣಗಳನ್ನು ಪುಸ್ತಕಗಳ ರೂಪದಲ್ಲಿ ಹೊರತಂದರು. ಅವರ ನಿಧನಾನಂತರ, ಚೆನ್ನೈ ರಾಮಕೃಷ್ಣ ಮಠವು **ವೇದಾಂತ ಕೇಸರಿ** ಎಂಬ ಆಂಗ್ಲ ಆಧ್ಯಾತ್ಮಿಕ ಪತ್ರಿಕೆಯನ್ನು ೧೯೧೪ ರಲ್ಲಿ ಆರಂಭಿಸಿತು. ೯೪ ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿರುವ ಈ ಪತ್ರಿಕೆಯ ಸುಮಾರು ೧೦,೦೦೦ ಪ್ರತಿಗಳು ವಿತರಣೆಯಾಗುತ್ತಿವೆ. ೧೯೨೧ ರಲ್ಲಿ ಮಠವು **ರಾಮಕೃಷ್ಣ ವಿಜಯಂ** ಎಂಬ ತಮಿಳು ಪತ್ರಿಕೆಯನ್ನು ಆರಂಭಿಸಿತು. ಇತ್ತೀಚಿನ ವರ್ಷಗಳಲ್ಲಿ ಅದು ಅಭೂತಪೂರ್ವ ಯಶಸ್ಸನ್ನು ಪಡೆದಿದ್ದು, ೧,೧೦,೦೦೦ ಪ್ರತಿಗಳ ಗಡಿಯನ್ನು ದಾಟಿದೆ. ಹಾಗೆಯೇ ಚೆನ್ನೈ ಮಠವು ೧೯೪೪ ರಲ್ಲಿ **ರಾಮಕೃಷ್ಣ ಪ್ರಭ** ಎಂಬ ತೆಲುಗು ಭಾಷೆಯ ಪತ್ರಿಕೆಯನ್ನು ಆರಂಭಿಸಿತು. ಅದನ್ನು ಈಗ ಹೈದರಾಬಾದ್ ರಾಮಕೃಷ್ಣ ಮಠಕ್ಕೆ ವರ್ಗಾಯಿಸಲಾಗಿದೆ. ಅದರ ಪ್ರಚಾರ ಸಂಖ್ಯೆಯೂ ಸುಮಾರು ೪೮,೦೦೦ ದಷ್ಟಿದೆ. ಪ್ರಸ್ತುತ ಚೆನ್ನೈ ರಾಮಕೃಷ್ಣ ಮಠವು ಇಂಗ್ಲಿಷಿನಲ್ಲಿ ೩೧೪ ಪುಸ್ತಕಗಳನ್ನೂ, ತಮಿಳು ಭಾಷೆಯಲ್ಲಿ ೩೪೮ ಪುಸ್ತಕಗಳನ್ನೂ ಪ್ರಕಟಿಸುತ್ತಿದೆ. ಆಧುನಿಕ ಮುದ್ರಣಾಲಯವನ್ನೂ ಹೊಂದಿರುವ ಈ ಮಠದ ಪುಸ್ತಕಗಳು ಅತ್ಯಂತ ಉತ್ತಮ ಗುಣಮಟ್ಟದ್ದಾಗಿವೆ. ಅವುಗಳನ್ನು ಮಠವು ಬಹಳ ಕಡಿಮೆ ಬೆಲೆಯಲ್ಲಿ ಸಾರ್ವಜನಿಕರಿಗೆ ಒದಗಿಸುತ್ತಿದೆ.



ಪ್ರದರ್ಶನದ ಉದ್ಘಾಟನೆ

**ಶತಮಾನೋತ್ಸವ:** ಚೆನ್ನೈ ರಾಮಕೃಷ್ಣ ಮಠದ ಪ್ರಕಾಶನ ವಿಭಾಗದ ಶತಮಾನೋತ್ಸವವು ೨೦೦೮, ಏಪ್ರಿಲ್ ೧೨ ರಿಂದ ೧೪ ರವರೆಗೆ ಅದ್ದೂರಿಯಾಗಿ ನಡೆಯಿತು. ಮೊದಲ ದಿನ ಬೆಳಗ್ಗೆ ೧೦.೩೦ ಕ್ಕೆ ಸರಿಯಾಗಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು, ಪ್ರಕಾಶನ ವಿಭಾಗದ ಇತಿಹಾಸವನ್ನು ಬಿಂಬಿಸುವ **ಪ್ರದರ್ಶನವನ್ನು ಉದ್ಘಾಟಿಸಿದರು**. ಅಂದು ಸಂಜೆ ೪ ಗಂಟೆಗೆ **ಶತಮಾನೋತ್ಸವದ ಉದ್ಘಾಟನಾ ಸಮಾರಂಭ** ನಡೆಯಿತು. ಇದರ ಅಧ್ಯಕ್ಷತೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಪ್ರಭಾನಂದಜಿ ಅವರು ವಹಿಸಿದ್ದರು. ಕಡಿಮೆ ದರದಲ್ಲಿ ಕೊಡಮಾಡಲಾಗುತ್ತಿರುವ ಹಲವಾರು ಇಂಗ್ಲಿಷ್ ಮತ್ತು ತಮಿಳು ಪುಸ್ತಕಗಳನ್ನು ಸ್ವಾಮಿ ಸ್ಮರಣಾನಂದಜಿ ಅವರು ಬಿಡುಗಡೆ ಮಾಡುತ್ತ, ಅನ್ನದಾನಕ್ಕಿಂತಲೂ ಹೆಚ್ಚಿನದು ವಿದ್ಯಾದಾನ; ಪುಸ್ತಕಗಳ ಪ್ರಕಟನೆಯು ವಿದ್ಯಾದಾನದ ಕಾರ್ಯ ಎಂದು ಪ್ರಶಂಸಿಸಿದರು. ಮಧುರೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಕಮಲಾತ್ಮಾನಂದಜಿ ಅವರು ಚೆನ್ನೈ ಮಠದ ಪ್ರಕಾಶನ ಕಾರ್ಯದ ಪಕ್ಷಿನೋಟವನ್ನು ನೀಡಿದರು; ಅದು ತಮಿಳುನಾಡಿನಲ್ಲಿ ಉಂಟುಮಾಡಿರುವ ಪ್ರಭಾವದ ಪರಿಚಯ ಮಾಡಿಕೊಟ್ಟರು. ಕೊಯಮತ್ತೂರಿನ ರಾಮಕೃಷ್ಣ ಮಿಷನ್ ವಿದ್ಯಾಲಯದ ಮುಖ್ಯಸ್ಥರೂ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಲ್ಲಿ ಒಬ್ಬರೂ ಆದ ಸ್ವಾಮಿ ಆತ್ಮಾರಾಮಾನಂದಜಿ ಅವರು ರಾಮಕೃಷ್ಣ ವಿವೇಕಾನಂದ ಸಾಹಿತ್ಯವು ಸಾಮಾಜಿಕ ಪರಿವರ್ತನೆಗೆ ಹೇಗೆ ಸಹಾಯ ಮಾಡಿದೆ ಎನ್ನುವುದನ್ನು ವಿವರಿಸಿದರು. ಸ್ವಾಮಿ ಪ್ರಭಾನಂದಜಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಉದಾತ್ತ ಚಿಂತನೆಗಳು ಮಾತ್ರವೇ ಸಮಾಜವನ್ನು ಉನ್ನತ ಸ್ತರಗಳಿಗೆ ಒಯ್ಯಬಲ್ಲವು; ಅದು ಪುಸ್ತಕಗಳ ಪ್ರಕಾಶನದಿಂದ ಆಗುತ್ತಿರುವ ಸ್ತುತ್ಯವಾದ ಕಾರ್ಯ ಎಂದರು. ಇದೇ ಸಂದರ್ಭದಲ್ಲಿ ಅವರು ಪ್ರಕಾಶನ ವಿಭಾಗಕ್ಕೆ ಗಣನೀಯ ಸೇವೆ ಸಲ್ಲಿಸಿದ ಲೇಖಕರು, ಅನುವಾದಕರು ಮತ್ತು ಕಲಾಕಾರರನ್ನು ಸನ್ಮಾನಿಸಿದರು. ಚೆನ್ನೈ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಮೊದಲಿಗೆ ಸ್ವಾಗತ ಭಾಷಣ ಮಾಡಿದರು. **ವೇದಾಂತಕೇಸರಿಯ** ಸಂಪಾದಕರಾದ ಸ್ವಾಮಿ ಆತ್ಮಶ್ರದ್ಧಾನಂದಜಿ ವಂದನಾರ್ಪಣೆ ಮಾಡಿದರು.



ಶತಮಾನೋತ್ಸವದ ಉದ್ಘಾಟನಾ ಸಮಾರಂಭ

೧೩.೦೪.೨೦೦೮ ರಂದು **ಯುವಸಮಾವೇಶವನ್ನು** ಆಯೋಜಿಸಲಾಗಿತ್ತು. ೫೨೦ ಕ್ಕೂ ಹೆಚ್ಚು ಯುವಕರು ಇದರಲ್ಲಿ ಪಾಲ್ಗೊಂಡಿದ್ದರು. ೧೪.೦೪.೨೦೦೮ ರಂದು ನಡೆದ **ಯುವತಿಯರ ಸಮಾವೇಶದಲ್ಲಿ** ೩೫೦ ಕ್ಕೂ ಹೆಚ್ಚು ಹೆಣ್ಣುಮಕ್ಕಳು ಭಾಗವಹಿಸಿದ್ದರು. ಶತಮಾನೋತ್ಸವದ **ಸಮಾರೋಪ ಸಮಾರಂಭದಲ್ಲಿ** ಸ್ವಾಮಿ ಗೌತಮಾನಂದಜಿ ಅವರು ಶತಮಾನೋತ್ಸವವನ್ನು ಯಶಸ್ವಿಗೊಳಿಸಿದ ಎಲ್ಲರನ್ನೂ ಪ್ರಶಂಸಿಸಿದರು. ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜ್ಞಾನದಾನಂದಜಿ ಅವರು ಪ್ರಕಾಶನ ಕಾರ್ಯದಲ್ಲಿ, ಮಠದ ಮುದ್ರಣಾಲಯ ವಿಭಾಗದ ಗಣನೀಯ ಸೇವೆಯನ್ನು ಕೊಂಡಾಡಿದರು. ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಅವರು ಚೆನ್ನೈ ಮಠದಿಂದ ಪ್ರಕಟವಾಗಿರುವ **ರಾಮಕೃಷ್ಣ ವಚನವೇದ** ಮತ್ತು **ಉಪನಿಷತ್ತುಗಳ** ಅಧ್ಯಯನದ ಮಹತ್ವವನ್ನು ಒತ್ತಿಹೇಳಿದರು.



ಸಮಾರೋಪ ಸಮಾರಂಭ

Managing Editor : *Swami Nityasthananda*

Editor : *Swami Vireshananda*

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.